‘ತಂದೆಲ್ಲ ತೊಗೊಂಡು ಹೋದ, ಉಳಿದವರು ಹೇಗೆ ಜೋಡಿಸ್ಕೊಬೇಕು ಇದನ್ನ ಈಗ, ಸ್ವಲ್ಪನಾದ್ರೂ ಕಾಳಜಿ ಬೇಡ್ವಾ’ ಅಂತ ಗೊಣಗಿಕೊಂಡವಳು ಇನ್ನೂ ಈ ಮಾತಾಡಬಾರದು ಎಂದು ಸುಮ್ಮನಾದಳು. ಈಗಂತೂ ಕ್ಲೀನ್ ಮಾಡೋಕೂ ಆಗೋದಿಲ್ಲ. ನಾಳೆ ನೋಡ್ಕೊಳೋಣ ಎಂದು ಹಾಗೇ ಒಂದಿಷ್ಟು ಹಾಸಿಗೆ ದೂಳು ಒದರಿಸಿ ಊಟವೂ ಮಾಡದೇ ಮಲಗಿದಳು.

‘ಒಂದಷ್ಟು ವರ್ಷದ ಬದುಕು, ಸಾಂಗತ್ಯ, ಹೋರಾಟ. ಹೇಗೆ ಶುರುವಾಗಿ ಹೇಗೆ ಮುಗೀತು. ಯಾವ ಕಿರಿಕಿರಿ ಬಂದಿತ್ತು ನಮ್ಮ ನಡುವೆ? ಆ ಕಿರಿಕಿರಿ ಈಗೋ ಆಗಿ ಬದಲಾಗಿದ್ದು ಯಾವಾಗ? ಇವತ್ತು ಇಷ್ಟು ದೂರ ಆಗಿದ್ದು ಹೇಗೆ? ಅವನು ಒಂದಾಗೋ ಪ್ರಯತ್ನ ಆಡಿದಾಗ ನಾನು ಹಿಂದೇಟು ಹಾಕಿದೆ. ನಾನು ಕೌನ್ಸೆಲಿಂಗ್ ತೊಗೊಳೋಣ ಅಂದಾಗ ಅವನು ನಂಗೆ ಅಗತ್ಯ ಇಲ್ಲ ಅಂದ. ನಮ್ಮಿಬ್ಬರಲ್ಲಿ ಸಮಸ್ಯೆ ಇತ್ತಾ ಅಥವಾ ಬರೀ ಈಗೋ ಅಷ್ಟೇನಾ? ಮುಂದೆ ಏನಿದೆ...?’ ಪ್ರಿಯಾಳ ಯೋಚನೆಗಳು ನಿದ್ದೆಯಲ್ಲೂ ಮುಂದುವರಿಯುತ್ತಿದ್ದವು.

* * *

‘ಕುಂಯ್ಞ್ ಕುಂಯ್...’

ಪಕ್ಕದ ಮನೆಯ ನಾಯಿಯ ಕುಂಯ್ಗುಡುವಿಕೆಗೆ ಪ್ರಿಯಾಗೆ ಎಚ್ಚರವಾಗಿತ್ತು. ಅಷ್ಟು ಸಣ್ಣ ಸದ್ದಿಗೆ ತಾನು ಎದ್ದಿದ್ದಾದರೂ ಹೇಗೆ ಎಂದುಕೊಳ್ಳುತ್ತಲೇ ಲೈಟ್ ಆನ್ ಮಾಡಿದಳು.

ಮನೆ ಅಸ್ತವ್ಯಸ್ತವಾಗಿದ್ದು ಯಾವುದೋ ಭೂಕಂಪವಾದ ಸ್ಥಳದಲ್ಲಿ ಇದೀನಾ ಎಂದು ಸುತ್ತ ಒಮ್ಮೆ ಕಣ್ಣಾಡಿಸಿದಳು. ಒಂದಿಷ್ಟು ಸಾಮಾನುಗಳು ಸೊಟ್ಟ ಸೊಟ್ಟಗಿದ್ದು ಕತ್ತಲಲ್ಲಿ ವಿಚಿತ್ರ ಆಕೃತಿಗಳ ಹಾಗೆ ಕಾಣಿಸುತ್ತಿದ್ದವು. ಹೀಗೇ ಮಲಗಿದ್ದಕ್ಕೇ ನಿದ್ದೆ ಸರಿಯಾಗಲಿಲ್ಲ ಎಂದುಕೊಂಡವಳು ಮಧ್ಯ ರಾತ್ರಿಯಲ್ಲಿ ಎಲ್ಲವನ್ನೂ ಸರಿಸಿ ಜೋಡಿಸತೊಡಗಿದಳು.

ಜರುಗಿಸಿದ ಸೋಫಾದ ಹಿಂದೆ ಒಂದಿಷ್ಟು ಕೂದಲ ಜೊಂಪೆ... ಕಪ್ಪು ಬಿಳಿ ಮಿಶ್ರಿತ. ನಿರ್ಲಿಪ್ತಳಾಗಿ ಗುಡಿಸಿದಳು. ಪೊರಕೆಯ ವೇಗಕ್ಕೆ ಮಂಚದ ಕೆಳಗಿಂದ ಒಂದಿಷ್ಟು ಕಸ ಹೊರಗೆ ಬಂತು. ಅರ್ಧ ಕಚ್ಚಿದ ಸೌತೆಕಾಯಿ, ಬಾಚಣಿಗೆ, ರಬ್ಬರ್ ಬಾಲ್, ಹಲ್ಲು ಕಡಿತಕ್ಕೆ ತಂದ ಕ್ಯಾಲ್ಸಿಯಂ ಮೂಳೆಯಂತಹಾ ಬಿಸ್ಕೆಟ್...

ಕುಸಿದು ಕುಳಿತು ನಡುಗುವ ಕೈಗಳಲ್ಲಿ ಒಂದೊಂದನ್ನೇ ಆಯ್ದು ಕಸದ ಚೀಲಕ್ಕೆ ಹಾಕಲಾರಂಭಿಸಿದಳು ಪ್ರಿಯಾ.

ಸ್ನೂಪಿ ಮಲಗಿರಬಹುದಾ....? ಅದಕ್ಕೆ ಗೊತ್ತಾಗಿರಬಹುದಾ...? ಅಮ್ಮ ಎಲ್ಲಿ ಅಂತ ನನ್ನ ಹಿಂದೆ ಅವಿತು ಕೂರೋಕೆ ನನ್ನ ಹುಡುಕಿರಬಹುದಾ? ಯಾರಿಗೆ ಕೊಡಬಹುದು ಅದನ್ನ..? ಅವರು ಸ್ನೂಪಿಯ ಭಯ ಆತಂಕ ಅರ್ಥ ಮಾಡ್ಕೊಂಡು ಮುದ್ದು ಮಾಡಬಹುದಾ...?

ಪ್ರಿಯಾಳ ಎದೆ ಭಾರವಾಗುತ್ತಾ ಹೋಯಿತು. ಅಳಲೂ ಆಗದೇ ಆತಂಕಪಡಲೂ ಆಗದೇ ಮನೆಯೆಲ್ಲ ಓಡಾಡಲಾರಂಭಿಸಿದಳು.

ವರ್ಷಗಳ ಸಂಘರ್ಷಕ್ಕೆ ಮುಕ್ತಿ ಸಿಕ್ಕಷ್ಟು ಸುಲಭವಿರಲಿಲ್ಲ ಈ ಪುಟ್ಟಜೀವವನ್ನು ದೂರಾಗಿಸಿ ಕೊಳ್ಳುವುದು. ನಿಮಿಷಗಳು ಕಳೆದಂತೆ ಪ್ರಿಯಾ ಇನ್ನಷ್ಟು ರೆಸ್ಟ್ ಲೆಸ್ ಆಗತೊಡಗಿದಳು.

ಅಲ್ಲಿ ಸ್ನೂಪಿಗೆ ಊಟ ಸೇರಬಹುದಾ? ಅವರು ಆಕೆಯ ಜೊತೆ ತಾಳ್ಮೆಯಿಂದ ಮಾತಾಡಬಹುದಾ, ನನ್ನ ಹಾಗೆ ತಬ್ಬಿಕೊಂಡು ಕಂದಾ ನಾನಿದೀನಿ ಅನ್ನಬಹುದಾ... ಉಗುರು ಕಚ್ಚುತ್ತಾ ಪ್ರಿಯಾ ಇನ್ನಷ್ಟು ಆತಂಕದಿಂದ ಯೋಚಿಸುತ್ತಿದ್ದಳು.

ಸ್ನೂಪಿಗೆ ನನ್ನ ಮುಂಗೈ ಕಚ್ಚುತ್ತಾ ಕೂರೋದು ಇಷ್ಟ. ಅವರ ಕೈಯನ್ನೂ ಹಾಗೇ ಕಚ್ಚಬಹುದಾ? ನಾಯಿ ಕೈ ಕಚ್ಕೋಕೆ ಬಂತು ಅಂತ ಅವರೇನಾದರೂ ಹೊಡೆದುಬಿಟ್ಟರೆ..? ಸ್ನೂಪಿಯ ಕಣ್ಣಲ್ಲಿ ನೀರು ತುಂಬಿ ನನ್ನ ಹುಡುಕಬಹುದಾ...? ಪ್ರಿಯಾ ಅರಿವಿಲ್ಲದೇ ತಲೆ ಚಚ್ಚಿಕೊಳ್ಳುತ್ತಿದ್ದಳು.

ಅಕಸ್ಮಾತ್... ಸ್ನೂಪಿ ಏನಾದರೂ ಅಮ್ಮ ಬಂದು ಕರ್ಕೊಂಡು ಹೋಗ್ತಾಳೆ ಅಂದುಕೊಂಡಿರಬಹುದಾ? ತಪ್ಪಿಸಿಕೊಂಡು ರೋಡಲ್ಲಿ ಎಲ್ಲಾದರೂ ಬಂದಿರಬಹುದಾ...? ಮನೆಯ ದಾರಿ ಗೊತ್ತಾಗದೆ ಇದ್ದರೆ...?

ಸ್ನೂಪೀ, ಸ್ನೂಪೀ... ಪ್ರಿಯಾ ಧಡಕ್ಕನೆ ಎದ್ದು ಕೂತಳು. ಬಾಗಿಲು ಮತ್ತೆ ಶಬ್ದವಾಗಿತ್ತು. ಜೊತೆಗೆ ಅದೇ ಪರಿಚಿತ ಕುಂಯ್ಗುಡುವಿಕೆ ಕೂಡ.

ಪ್ರಿಯಾ ಮೈಮೇಲೆ ಏನೋ ಬಂದವಳ ಹಾಗೆ ಬಾಗಿಲು ತೆಗೆದಿದ್ದಳು.